ಮಂತ್ರಿಗಳ ಹತ್ತಿರ ಮಾತನಾಡಿ ನಿಮ್ಮ ಕೆಲಸ ಮಾಡಿಸಿಕೊಡುತ್ತೇನೆ.

ಋ) ವಿಟ್ಲ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿದ ಕಲ್ಲಡಕ ಒಂದು ಬದಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತೊಂದು ಬದಿಯಲ್ಲಿ ರಾಜ್ಯ ಹೆದ್ದಾರಿ ಹಾದು ಹೋಗುವಂತಹ ಪ್ರದೇಶ ಇದೆ. ಎರಡೂ ಇಲಾಖೆಗೆ ಸೇರಿದಂತಹ ಜಮೀನು ಇದೆ. ಅಲ್ಲಿ ಕೆಲವು ವರ್ಷಗಳಿಂದ ಅನಧಿಕೃತ ಶೆಡ್‌ಗಳು ತಲೆ ಎತ್ತಿ ಅಲ್ಲಿ ವ್ಯಾಪಾರ ಪ್ರಾರಂಭ ಆಗಿದೆ. ಅದರಲ್ಲಿ ಕೆಲವು ಹೋಟೆಲ್‌ಗಳೂ ತಲೆ ಎತ್ತಿವೆ. ಮೂರ್ನಾಲ್ಕು ಹೋಟೆಲ್‌ಗಳು ಇವೆ. ಇಲ್ಲಿ ಹೋಟೆಲ್‌ನಿಂದಾಗಿ ಕೊಳಕು ನೀರೆಲ್ಲಾ ಶೇಖರಣೆ ಆಗಿ ಅಲ್ಲಿ ದುರ್ನಾತ ಬೀರಿ ಆಸುಪಾಸಿನಲ್ಲಿ ಓಡಾಡಲು ಆಗುವುದಿಲ್ಲ. ಜನತುಂಬಾ ರೋಸಿ ಹೋಗಿದ್ದಾರೆ. ಅಲ್ಲಿ ಹತ್ತಿರದಲ್ಲಿಯೇ ಮಸೀದಿ ಇದೆ, ಶಾಲೆ ಇದೆ. ಜನಸಂಚಾರಕ್ಕೆ ಹಾಗೂ ಮಕ್ಕಳಿಗೆ ಹೋಗಲು ಕಷ್ಟ ಆಗುತ್ತಿದೆ. ಪಂಚಾಯತಿಯವರು ಸಹ ಅಲ್ಲಿ ನಿರ್ಣಯ ಮಾಡಿದ್ದಾರೆ. ತಾಲ್ಲೂಕು ಪಂಚಾಯತಿಯವರು ಹೋಟೆಲ್ ತೆಗೆಸಬೇಕೆಂದು ನಿರ್ಣಯ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಸಹ ಇವತ್ತಿನವರೆಗೆ ಅದನ್ನು ತೆಗೆದಿಲ್ಲ. ಅದನ್ನು ಆದಷ್ಟು ಬೇಗ ತೆಗೆಸುವಂತಹ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇಲ್ಲಿ ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಾಣ ಮಾಡಿದ್ದಾರೆಂದು ಹೇಳಿದ್ದಾರೆ. ಸರ್ಕಾರಿ ಭೂಮಿಯಲ್ಲಿ ಇದ್ದರೆ ಅದನ್ನು ತೆಗೆಸುವಂತಹ ಕಾರ್ಯಕ್ರಮ ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು.

ಎ) ಮೈಸೂರಿನ ಗಂಗೋತ್ರಿ ಬಡಾವಣೆಯ ಕುದುರೆ ಮಾಳದಲ್ಲಿ ಭಾರಿ ಮಳೆಯಿಂದಾಗಿರುವ ನಷ್ಟದ ಬಗ್ಗೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಗೌರವಾನ್ವಿತ ಸಭಾಧ್ಯಕ್ಷರೆ ನಿಮ್ಮ ಬಾಯಿಂದ ಬಂದ ನುಡಿಮುತ್ತುಗಳು ಹೇಗಿದೆ ಎಂದರೆ ಬಸವಣ್ಣನವರು ಹೇಳುತ್ತಿದ್ದರಲ್ಲಾ ''ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ಸ್ಪಟಿಕದಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಹೌದು, ಹೌದು ಎನ್ನಬೇಕು ನುಡಿಯೊಳಗೆ ನಡೆಯದಿದ್ದರೆ ನಮ್ಮ ಕೂಡಲ ಸಂಗಮ ಮೆಚ್ಚನಯ್ಯ'' ಎಂಬಂತೆ ಅರ್ಥ ಗರ್ಭಿತ ಆಗಿತ್ತು. ನೀವು ಹೇಳಿದ ವ್ಯಾಖ್ಯಾನ ನಮ್ಮ ಮನಸ್ಸನ್ನು ಪ್ರಫುಲ್ಲಗೊಳಿಸಿತು. ಅದರಿಂದ ಇದನ್ನು ಹೇಳುತ್ತಿದ್ದೇನೆ. ಕಳೆದ ಒಂದು ತಿಂಗಳ ಹಿಂದೆ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಯವರು ಸ್ವಯಂ ಸೇವಾ ಸಂಸ್ಥೆಗಳಿಗೆ 18 ಲಕ್ಷ ರೂಪಾಯಿಗಳ ಅನುದಾನವನ್ನು, ಸಮಾಜ ಕಲ್ಯಾಣ ಇಲಾಖೆಯಿಂದ ಐದು ಲಕ್ಷ ಪಡೆದು 120 ಮನೆಗಳನ್ನು ನಿರ್ಮಾಣ ಮಾಡಿದ್ದರು. ಗಂಗೋತ್ರಿ ಬಡಾವಣೆಯ ಕುದುರೆ ಮಾಳದಲ್ಲಿ

ನಿರ್ಮಾಣ ಮಾಡಿದ್ದರು. ಮೊನ್ನೆ ಪ್ರಕೃತಿಯ ವಿಕೋಪಕ್ಕೆ ಅವರು ಹಾಕಿದ್ದಂತಹ ಸೂರೆಲ್ಲಾ ಸಂಪೂರ್ಣವಾಗಿ ಚೂರು ಚೂರಾಗಿ ಹೋಗಿದೆ. ಬಹುಶಃ ಉಪ ಮುಖ್ಯಮಂತ್ರಿಯವರು ಅದನ್ನು ಉದ್ಘಾಟನೆ ಮಾಡಿದಂತಹ ಗಳಿಗೆಯೇ ಸರಿ ಇಲ್ಲವೋ, ಅಥವ ಅವರ ಕಷ್ಟದ ಕಾಲವೋ ಗೊತ್ತಿಲ್ಲ. ಈಗ ಸುಮಾರು 72 ಕುಟುಂಬಗಳು ಸಂಪೂರ್ಣವಾಗಿ ನಾಶವಾಗಿ ಅನಾಥವಾಗಿ ಅವರಿಗೆ ಸೂರು ಇಲ್ಲದೆ ನೆಲ ಕಚ್ಚಿದ್ದಾರೆ. ಅವರು ಇಟ್ಟಿರತಕ್ಕಂಥ ಅಕ್ಕಿ ಮತ್ತು ರಾಗಿ ಎಲ್ಲಾ ಸಂಪೂರ್ಣವಾಗಿ ನಾಶ ಆಗಿದೆ. ಪ್ರತಿ ಕುಟುಂಬಕ್ಕೂ ಸಹ ಹತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಬೇಕು. ಸೂರು ಮುಚ್ಚುವ ಕೆಲಸವನ್ನು ಮಾಡಬೇಕು. ಆ ಬಡ ಜನರ ದಾರುಣ ಕಷ್ಟವನ್ನು ಅರ್ಥ ಮಾಡಿಕೊಂಡಿರತಕ್ಕ ಪಟೇಲ್‌ರ ಸರ್ಕಾರ ಪಟ್ಟಾಗಿ ಆ ಕೆಲಸವನ್ನು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮೊನ್ನೆ ಭಾರಿ ಮಳೆ ಬಂತು. ದೊಡ್ಡ ಬಿರುಗಾಳಿ ಬಂತು. ಹಾಗಾಗಿ ಮನೆಯ ಮೇಲಿರತಕ್ಕ ಜಿಂಕ್ ಶೀಟ್‌ಗಳೆಲ್ಲಾ ಎದ್ದು ಹೋಗಿದ್ದಾವೆ. ಅದು ಕುದುರೆ ಮಾಳ ಎಂಬ ಸ್ಥಳ ಅವರ ಕ್ಷೇತ್ರಕ್ಕೆ ಬರುತ್ತದೆ. ನಾವು ಅವರೆಲ್ಲ ಉದ್ಘಾಟನೆ ಮಾಡಲಿಕ್ಕೆ ಹೋಗಿದ್ದೆವು. ಸುಮಾರು 118 ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿಗೆ ಜಿಲ್ಲಾಧಿಕಾರಿಯವರು ಭೇಟಿ ಕೊಟ್ಟು ತಾತ್ಕಾಲಿಕವಾಗಿ ಏನೇನು ಕ್ರಮ ತೆಗೆದುಕೊಳ್ಳಬೇಕು, ಏನು ಪರಿಹಾರ ಕೊಡಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಆ ಮನೆಗಳನ್ನೆಲ್ಲ ರಿಪೇರಿ ಮಾಡಿಸಿ ಕಟ್ಟಸಿಕೊಡತಕ್ಕ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಅವರಿಗೆ ದಯಮಾಡಿ ಪರಿಹಾರವನ್ನು ಕೊಡಬೇಕು.

ಅಧ್ಯಕ್ಷರು: ಅದನ್ನೂ ಪರಿಗಣನೆ ಮಾಡುತ್ತಾರೆ.

ಐ) ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ (ಬಿಜಾಪುರ): ಮಾನ್ಯ ಅಧ್ಯಕ್ಷರೆ, ಬಿಜಾಪುರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣ ಮಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರನ್ನು ಮೊದಲನೆಯದಾಗಿ ಅಭಿನಂದಿಸುತ್ತೇನೆ. ಕೃಷ್ಣಾ ನದಿಯಿಂದ ಬರತಕ್ಕ ಕೋಳಾರ್ ಸಮೀಪವಿರತಕ್ಕ ಬ್ಯಾರೇಜ್‌ನಲ್ಲಿ ಇನ್ನು 10- 12 ದಿವಸಗಳಲ್ಲಿ ನೀರು ಖಾಲಿಯಾಗತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮತ್ತೆ ಬಿಜಾಪುರಕ್ಕೆ ಕುಡಿಯುವ ನೀರಿನ ಸಮಸ್ಯೆ ಒದಗಲಿದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇವತ್ತು ಇದರ ಬಗ್ಗೆ ಒಂದು ವಿಶೇಷವಾದ ವರದಿ ಸಹ ಬಂದಿದೆ. ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಬಂದಾಗ ಹಲವಾರು ವರ್ಷಗಳಿಂದ ಸರ್ಕಾರ